<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ</u>

ಸಿಸಿ ನಂ ಃ 871/2019
ಸಿಡಬ್ಲು ಃ 4
ಪಿಡಬ್ಲು ಃ 2

ಹೆಸರು ಃ ಬಸವರಾಜ ಡಿ
ವಯಾ ಃ 41 ವರ್ಷ
ಉದ್ಯೋಗ ಃ ಅಬಕಾರಿ ಪೇದೆ ಬೆಳಗಾವಿ ವಲಯ-2
ವಾಸ ಃ ಬೆಳಗಾವಿ

(ದಿನಾಂಕಃ 11-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)

<u>ಮುಖ್ಯ ವಿಚಾರಣೆ ಸಸಅಃರವರಿಂದಃ</u>

ನಾನು 2016 ರಿಂದ 2022 ರ ವರೆಗೆ ನಾನು ಹುಕ್ಕೇರಿ ವಲಯದಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 16-03-2019 ರಂದು ನಾವು ಕಚೇರಿಯಲ್ಲಿದ್ದಾಗ ಚಾಸಾ -1 ರವರು ಚುನಾವಾಣೆ ನಿಮಿತ್ಯ ಗಸ್ತು ಮಾಡಲು ಬಸಾಪೂರು ಗ್ರಾಮಕ್ಕೆ ಹೋಗುವುದಾಗಿ ತಿಳಿಸಿರುತ್ತಾರೆ ನಂತರ ಸಂಕೇಶ್ವರ ಪಟ್ಟಣದ ಬಸ್. ನಿಲ್ದಾಣದಲ್ಲಿ ನಿಂತಿದ್ದ ಪ್ರಕಾಶ ಚೌಗಲೆ ಮತ್ತು ದುಂಡಪ್ಪಾ ಕಿವಂಕಾ ಇವರನ್ನು ನಮ್ಮ ಸಿಬ್ಬಂದಿ ಮೂಲಕ ಕರೆಸಿಕೊಂಡು ಪರಸ್ಪರ ಪರಿಚಯ ಮಾಡಿಕೊಂಡು ನಾನು ಮತ್ತು ಚಾಸಾ-1 ರವರೊಂದಿಗೆ ಹೋಗಿರುತ್ತೇವೆ .

ನಾವುಗಳು ಕೆಎ-22 ಜಿ-0883 ವಾಹನದಲ್ಲಿ ಹಂಚಿನಾಳ ಕ್ರಾಸ , ಹಿಡಕಲಡ್ಯಾಂ ಪಾಶ್ಚಾಪೂರ ಕರಗುಪ್ಪಿ ಮಾರ್ಗವಾಗಿ ಬೆಳಿಗ್ಗೆ 11 ಗಂಟೆಗೆ ಬಸ್ಸಾಪೂರ ಗ್ರಾಮ ತಲುಪಿರುತ್ತೇವೆ. ಸದ್ರಿ ಗ್ರಾಮದಲ್ಲಿ ಅಬಕಾರಿ ಪ್ರಕರಣ ಕುರಿತು ಗಸ್ತು ಮಾಡುತ್ತಿರವಾಗ ಸದ್ರಿ ಗಾಮದ ಶಿವನವ್ವ ಮಾರುತಿ ಗುರವ ಎಂಬುವವರ ಮನೆಯಲ್ಲಿ ಅಕ್ರಮ ಕಳ್ಳಭಟ್ಟಿ ಸಾರಾಯಿಯನ್ನು ಮಾರಾಟಕ್ಕಾಗಿ ಸಂಗ್ರಹಿಸಿಟ್ಟಿರುವ ಬಗ್ಗೆ 11-05 ಗಂಟೆಗೆ ಮಾಹಿತಿ ಬಂದಿರುತ್ತದೆ. ಸದ್ರಿ ಗ್ರಾಮದಲ್ಲಿ ಅವರಿವರನ್ನು ಕೇಳುತ್ತಾ ಶಿವನವ್ವ ಮಾರುತಿ ಗುರವ ಇವರ ಮನೆ ಹತ್ತಿರ ಹೋಗಿದ್ದು ಪೂರ್ವಕ್ಕೆ ಪ್ರವೇಶ ದ್ವಾರ ಹೊಂದಿರುವ ಹಂಚಿನ ಮನೆ

ಮುಂದೆ ನಿಂತು ಒಳಗಡೆ ಯಾರು ಇದ್ದೀರಾ ಎಂದು ಕೂಗಿ ಕೇಳಲಾಗಿ ಒಬ್ಬಳು ಮಹಿಳೆ ಹೊರಗೆ ಬಂದಿರುತ್ತಾಳೆ. ನಾವು ಮಹಿಳಾ ಅಬಕಾರಿ ರಕ್ಷಕಿ ಸಹಾಯದಿಂದ ಅವಳ ಹೆಸರು ಕೇಳಲಾಗಿ ಶಿವನವ್ವ ಮಾರುತಿ ಗುರವ ಸಾಃ ಬಸ್ಸಾಪೂರ ಎಂದು ತಿಳಿಸಿರುತ್ತಾಳೆ. ಆಗ ನಿಮ್ಮ ಮನೆಯಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಂಗ್ರಹಿಸಿರುವುದಾಗಿ ಮಾಹಿತಿ ಬಂದಿರುತ್ತದೆ ಎಂದು ತಿಳಿಸಿರುತ್ತೇವೆ. ಅವಳು ಗಾಬರಿಯಿಂದ ಇಲ್ಲ ಎಂದು ತಿಳಿಸಿರುತ್ತಾಳೆ. ಆಗ ನಾವು ಸಂಶಯದಿಂದ ಮನೆಯನ್ನು ಶೋಧಿಸಲು ನಿರ್ಧರಿಸಿರುತ್ತೇವೆ. ಮಾನ್ಯ ನ್ಯಾಯಾಲಯದಿಂದ ಶೋಧನಾ ವಾರಂಟ ಪಡೆಯಲು ಸಮಯಾವಕಾಶ ಇಲ್ಲದೇ ಇರುವುದರಿಂದ ಪಂಚರಿಗೆ ಮತ್ತು ಮಹಿಳೆಗೆ ತಿಳಿಸಿ ಸ್ಥಳದಲ್ಲಿ ಶೋಧನಾ ಸಮುಚಿತ ಆಧಾರವನ್ನು ತಯಾರಿಸಿ ಪಂಚರಿಗೆ ಅಂಗ ಜಪ್ತು ಮಾಡಲು ತಿಳಿಸಿ ಮನೆಯ ತಪಾಸಣೆಗಾಗಿ ಒಳಗೆ ಪ್ರವೇಶ ಮಾಡಿರುತ್ತೇವೆ. ಮನೆ ತಪಾಸಣಾ ಸಮಯದಲ್ಲಿ ಅಡುಗೆ ಮಾಡುವ ಕೋಣೆಯ ಒಂದು ಮೂಲೆಯಲ್ಲಿ ಬಟ್ಟೆಯ ಕೆಳಗಡೆ ಏನೋ ಮುಚ್ಚಿಟ್ಟಿದ್ದು ಕಂಡು ಬಂದಿರುತ್ತದೆ. ಹತ್ತಿರ ಹೋಗಿ ಬಟ್ಟೆ ಸರಿಸಿ ನೋಡಲಾಗಿ ಒಂದು ಪ್ಲಾಸ್ಟಿಕ ಕೊಡ ಇದ್ದು ಪರಿಶೀಲಿಸಲಾಗಿ ಒಂದು ಹಳದಿಬಣ್ಣದ 10 ಲೀಟರ ಕೊಡದಲ್ಲಿ ಅಂದಾಜು 10 ಲೀಟರಿನಷ್ಟು ಕಳ್ಳಭಟ್ಟಿ ಸಾರಾಯಿ ಇತ್ತು.

ಈ ಕೃತ್ಯಕ್ಕೆ ಸಂಬಂಧಿಸಿದಂತೆ ಪ್ರಶ್ನೆ ಕೇಳಲಾಗಿ ಆ ಮಹಿಳೆ ಸಮಂಜಸ ಉತ್ತರ ಕೊಟ್ಟಿರುದಿಲ್ಲ. ಆಕೆಯ ಹೆಸರು ವಿಳಾಸ ಕೇಳಲಾಗಿ ಶಿವನವ್ವ ಮಾರುತಿ ಗುರವ ವಯಸ್ಸು 55 ಎಂದು, ಸಾಃ ಬಸ್ಸಾಪೂರ ಎಂದು ತಿಳಿಸಿದಳು. ಪಂಚರ ಸಮಕ್ಷಮ ಮುದ್ದೆಮಾಲನ್ನು ಜಪ್ತು ಪಡಿಸಿ ಆರೋಪಿತಳನ್ನು ಮಹಿಳಾ ಅಬಕಾರಿ ರಕ್ಷಕಿಯಿಂದ ದಸ್ತಗೀರ ಮಾಡಿ ಮುಂದಿನ ಕ್ರಮಕ್ಕಾಗಿ ಇಲಾಖೆ ವಶಕ್ಕೆ ತೆಗೆದುಕೊಂಡಿರುತ್ತೇವೆ. ಪಂಚರಿಗೆ ಮಹಿಳೆ ಮತ್ತು ಮನೆಯ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸುತ್ತೇವೆ ಎಂದು ತಿಳಿಸಿರುತ್ತೇವೆ. ಜಪ್ತಾದ ಕಳ್ಳಭಟ್ಟಿ ಸಾರಾಯಿಯಿಂದ 750 ಮಿಲಿಯ ಬಾಟಲಿಯಲ್ಲಿ ಸ್ಯಾಂಪಲಗಾಗಿ ತೆಗೆದು ಬಾಟಲಿ ಬಾಯಿಗೆ ಬಿರುಡೆ ಹಾಕಿ ಬಟ್ಟೆ ಸುತ್ತಿ ದಾರದಿಂದ ಕಟ್ಟಿ ಅರಗು ಬಳಿಸಿ ಶೀಲು ಮಾಡಲಾಯಿತು. ನನ್ನ ಮತ್ತು ಪಂಚರ ಸಹಿ ಇರುವ ಚೀಟಿ ತಯಾರಿಸಿ ಸ್ಯಾಂಪಲ ಬಾಟಲಿ ಮತ್ತು ಕೊಡಕ್ಕ ಅಂಟಿಸಲಾಯಿತು. ಮಾದರಿ ಮೊಹರಿನ ಚೀಟನ್ನು ತಯಾರಿಸಲಾಯಿತು. ಸ್ಥಳದಲ್ಲಿ 11-40 ರಿಂದ 12-50 ರ ವರೆಗೆ ಪಂಚನಾಮೆ ಜರುಗಿಸಲಾಯಿತು. ಪಂಚನಾಮೆಗೆ ಪಂಚರ ಸಹಿ ಪಡೆಯಲಾಯಿತು.

ನಂತರ ಸಂಕೇಶ್ವರ ಅಬಕಾರಿ ಠಾಣೆಗೆ ಬಂದು ಚಾಸಾ-1 ರವರು ಸರಕಾರಿ ತರ್ಫೆ ಸ್ವಫಿರ್ಯಾದು ಸಲ್ಲಿಸಿ ಪ್ರಥಮ ವರ್ತಮಾನ ವರದಿ ದಾಖಲಿಸಿರುತ್ತಾರೆ.

ಸಾಕ್ಷಿ ಈಗ ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲುಗಳನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಗಾಗಲೇ ಮುಮಾ-1 ಎಂದು ಗುರುತಿಸಲಾಗಿದೆ. . ಸಾಕ್ಷಿಯು ಆರೋಪಿಯನ್ನು ನೋಡಿದರೆ ಗುರುಸಿಸುತ್ತೇನೆ ಅವರು ಗೈರುಹಾಜರಾಗಿದ್ದು ಗುರುತಿಸಸಲು ಯಾವುದೇ ತಕರಾರು ಇಲ್ಲ.

ಪಾಟಿ ಸವಾಲುಃ ಶ್ರೀ ಆರ್.ಬಿ.ಸಿ. ವಕೀಲರಿಂದ ಆರೋಪಿತನ ಪರವಾಗಿ -

ನಾವು ಗಸ್ತು ಮಾಡುತ್ತಿರುವ ಬಗ್ಗೆ ಚಲನವಲನ ಪುಸ್ತಕದಲ್ಲಿ ನಮೂದು ಮಾಡಿರುತ್ತೇವೆ. ನಾವು ಬಸ್ಸಾಪೂರ ಗ್ರಾಮಕ್ಕೆ ಹೋಗುವ ಮುಂಚೆ ಆರೋಪಿಯ ಮುಖಚೆಹರೆ ಬಗ್ಗೆ ನಮ್ಮ ಹತ್ತಿರ ಫೋಟೊ ಇರಲಿಲ್ಲ. ಬೆಳಗಾವಿಗೆ ಹೋಗುವ ಮುಂಚೆ ಘಟನಾ ಸ್ಥಳದ ಮನೆಯ ಸುತ್ತ ಮುತ್ತ ಸಾಕಷ್ಟು ವಾಸದ ಮನೆಗಳು ಇವೆ ಎಂದರೆ ಸರಿ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಪೋಲಿಸರು ಸಮವಸ್ತ್ರದಲ್ಲಿ ಹೋದರೆ ಜನ ಸೇರುತ್ತಾರೆ ಎಂದರೆ ಇರಬಹುದು. ನಾನು ಜನರ ಕಡೆಗೆ ಗಮನ ಕೊಟ್ಟಿರುವುದಿಲ್ಲ. ಸ್ಥಳಕ್ಕೆ ಹೋಗಿದ್ದೆವು ಎಂದು ತೋರಿಸಲು ಕಚ್ಚಾ ನಕಾಶೆಯಾಗಲೀ ಅಥವಾ ಫೊಟೊವಾಗಲೀ ತೆಗೆಸಿಲ್ಲ. ಸ್ಥಳೀಕರನ್ನು ವಿಚಾರಣೆ ಮಾಡಿದ ಬಗ್ಗೆ ಅವರ ಹೇಳಿಕೆ ಪಡೆದಿಲ್ಲ. ಅವರ ಹೆಸರುಗಳ ಬಗ್ಗೆ ವಿಚಾರಣ ಮಾಡಿರುವುದಿಲ್ಲ. ನನಗೆ ಚುನಾವಣಾ ಸಮಯದಲ್ಲಿ ಇಂತಿಷ್ಟು ಅಬಕಾರಿ ಪ್ರಕರಣಗಳನ್ನು ದಾಖಲಿಸಬೇಕೆಂದು ನಿರ್ದೇಶನ ನೀಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ನಮ್ಮ ಮೇಲಾಧಿಕಾರಿಯವರು ಎಂದರೆ ಸರಿ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ .

ದಿನಾಂಕ 16-03-2019 ರಂದು ನಾವು ಬೆಳಿಗ್ಗೆ 11-30 ಗಂಟೆಗೆ ಬಸ್ಸಾಪೂರ ಗ್ರಾಮದ ಶಿವನವ್ವ ಗುರವ ಇವರ ಮನೆಯ ಹತ್ತಿರ ಹೋಗಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಕಲಂ 54 ಅಬಕಾರಿ ಕಾಯಿದೆ ಪ್ರಕಾರ ಸ್ಥಳದಲ್ಲಿ ಶೋಧನಾ ವಾರಂಟ ತಯಾರು ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮನೆಯ ಅಡುಗೆ ಕೋಣೆಯಲ್ಲಿ 10 ಲೀಟರ ಸಾಮರ್ಥ್ಯದ ಹಳದಿ ಬಣ್ಣದ ಕೊಡದಲ್ಲಿ ಕಳ್ಳಭಟ್ಟಿ ಕಂಡು ಬಂತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಮೇಲಾಧಿಕಾರಿಗಳ ಆದೇಶ ಪಾಲನೆಗಾಗಿ ಹಾಗೂ ಚುನಾವಣಾ ಅಂಕಿ ಸಂಖ್ಯೆಗೋಸ್ಕರ ಆರೋಪಿ ವಿರುದ್ದ. ಸುಳ್ಳು ಪ್ರಕರಣದ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ 750 ಎಂ ಎಲ್ ಮಿಲಿಯ ಕಳ್ಳಭಟ್ಟಿ ಸಾರಾಯಿಯನ್ನು ರಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕಿಸಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**